ಉಲುಪಯ್ಯ: ನೀನೇಳಿದ್ ನಿಜ ಅನ್ನು. ಅಲ್ಲ ಆಡ ಮಕ್ಳ್ ಕೊಳ್ಳಿಗ್ ಸಂಸಾರ ಕಟ್ಟಂತ ಕಾಲ ಬಂತಲ್ಲ. ಆ ಪೆಮ್ನಳ್ಳಿ ಪುಟ್ಟಯ್ಯಿನ್ ಮಗುನ್ ಮದ್ವೆ ಅಂತೆ, ಕಾಲ ಕೆಟ್ಟಿಲ್ಲ ಅಂತ ಎಂಗೇಳ್ತಿ. ಅಲ್ಲ, ನೆತ್ತಿ ಆರ್ದಂಗಿರ ಹುಡುಗುರ್ಗೆ ಸಂಸಾರ ಕಟ್ಟುದ್ರೆ ಕಾಪ್ರ ಎಂಗ್ ಮಾಡ್ತವೇಳು. ಎಳೆ ಕರಿಗ್ ಮೂಗ್ದಾರ ಏರ್ಸ್ದಂಗಾಗಿ ನಚ್ಚುರ್ಗೋಗೀಗಲ್ವ.

ಬುಡ್ಡಯ್ಯ: ಇನ್ನ ಎಂತೆಂತ ಕಾಲ ಬರ್ತದೊ ಕಾಣ್ದಪ್ಪ, ತುಂಬೆ ಗಿಡಕ್ ಏಣಿ ಹಾಕಿ ಹೂವ್ ಬಿಡ್ಸ ಅಂತ ಮಕ್ಳ್ ಹುಟ್ತವ ಅನುಸ್ತದೆ.

ಉಲುಪಯ್ಯ: ಅದ್ಕೆ ನಾನೇಳಿದ್ದು ಕಾಲ ಕೆಟ್ಹೋತು ಅಂತ.

ಸಂಭಾಷಣೆ ಕಿವಿಗೊಟ್ಟು ಕೇಳುತ್ತಿದ್ದ ಇಬ್ಬರ ಸುಕ್ಕುಗಟ್ಟಿದ ಹಣೆದೊಗಲು ಅಹುದು ಅಹುದೆಂಬಂತೆ ಮೇಲಕ್ಕೂ ಕೆಳಕ್ಕೂ ಆಡುತ್ತಿತ್ತು. ಕಾಯಕ ಜೀವಿಗಳಾದ ಇಬ್ಬರ ಕೈಗಳು ಒಂದಕ್ಕೊಂದು ಸಹಕರಿಸುತ್ತ ಹೆಬ್ಬೆರಳಿಗಿಂತ ತುಸು ದೊಡ್ಡದಾದ ಮಣ್ಣಿನ ಹೂಜಿಗೆ ಭಂಗಿ ಸೊಪ್ಪು ತುಂಬುತ್ತಿವೆ. ಸೊಪ್ಪು ತುಂಬಿದ ಹೂಜಿ ಕಂಠಕ್ಕೆ ಮಾಸಿದ ಬಿಳಿ ಬಟ್ಟೆ ಪೇಟ ತೊಡಿಸಿ, ಅದರ ತಿಕದಲ್ಲಿರುವ ಕಿಂಡಿಗೆ ಬೆಂಕಿ ಕಾಣಿಸಿ, ಹಲ್ಲಿಲ್ಲದ ಇಬ್ಬರ ಬಾಯಿ ಸರತಿಯಂತೆ ಉಸಿರು ಕಟ್ಟಿ ದಮ್ಮೆಳೆಯುತ್ತಿವೆ. ಪೇಟದಿಂದ ಹೊರಟ ದಟ್ಟ ಹೊಗೆ ಅಸ್ವಾದಿಸುತ್ತ ಇಬ್ಬರೂ ಮೈ ಮರೆತಿರುವರು. ಹೂಜಿಯಲ್ಲಿ ಹುಟ್ಟಿ ಪೇಟದಿಂದ ಹೊರಟ ಹೊಗೆ ಗಂಟಲು ಬೇದಿಸಿ ಇಬ್ಬರ ಎದೆ ಗೂಡ ಸೇರಿತು.

ಸಂಜೆಯಾಗುತ್ತಲೆ ಭಂಗಿ ಸೊಪ್ಪಿನ ಹೊಗೆ ಉಲುಪಯ್ಯಗೆ ಕಡ್ದಾಯ ಎಂಬ ಕುರುಹು ಅದರ ಮುಖದಲ್ಲಿ ಎದ್ದು ಕಾಣುತ್ತಿತ್ತು. ಹೊಗೆ ಕುಡಿ ಕುಡಿದು ಬಿಳಿ ಮೀಸೆ ಬಣ್ಣಗೆಟ್ಟಿದೆ. ಎದೆಗೂಡು ಹೊಕ್ಕ ಭಂಗಿ ಹೊಗೆ ತನ್ನ ಕೆಲಸ ಮುಗಿಸಿ; ಹಿರಿತಲೆಗಳ ಮೈ ಬಿಸಿಯಾಗಿಸಿ ಒಳ ಹೊರಗಾಗುತಿತ್ತು. ಹಜಾರದಲ್ಲಿ ಬಿಳಿ ಮೋಡದಂತೆ ತೇಲಾಡಿ ಬುಡ್ಡಯ್ಯನ ಬುಡವನ್ನೇ ಅಲ್ಲಾಡಿಸಿತು. ಹೊಗೆ ಕಾಟ ತಾಳದ ಅವನ ಮೈಯಲ್ಲಿದ್ದ ಜೀವಜಲ ಕಣ್ಣಿಂದ ಹೊರಟು ಸುಕ್ಕುಗಟ್ಟಿದ ಕೆನ್ನೆ ತೊಗಲ ಗೆರೆಗಳ ತಟಾದು ಸೊಂಪಾದ ಗಡ್ಡದಲಿ ಮರೆಯಾಯಿತು. ಹಜಾರದಲ್ಲಿ ಜಾಗ ಸಾಲದೆ ಅರೆದೆಗೆದ ಬಾಗಿಲ ಸಂಧಿಯಲ್ಲಿ ತೂರಿ ಅಡಿಗೆ ಮನೆಯಲ್ಲಿ ಜಾಗ ಕೇಳಿತು. ಒಲೆಯಲ್ಲಿ ಬಲವಂತಕ್ಕೆ ಹತ್ತಿ ಕಣ್ಣೀರು ಸುರಿಸಿ ಉರಿಯುತ್ತಿದ್ದ ಹಸಿ ಸೌದೆ ಊದ್ರ ಎದುರಾಯಿತು. ಕಿಟಕಿ ಇಲ್ಲದ ಅಡುಗೆ ಮನೆಯಲ್ಲಿ ಎರಡು ಹೊಗೆ ಸೇರಿ ಇಕ್ಕಟ್ಟಿನಲ್ಲಿ ಒದ್ದಾಡಿತು. ಹೊಟ್ಟೆಗೆ ಹಿಟ್ಟು ಬೇಯಿಸುತ್ತಿದ್ದ ಉಲುಪಯ್ಯನ ಹೆಂಡತಿ ಗಾಬಮ್ಮನ ಮೂಳೆ ಮಾಂಸದ ತಡಿಕೆಯಂತ ಎದೆಗೂಡ ಸೇರಿತು. ಮುಪ್ಪರಿದ ಗಾಬಮ್ಮನ ಸಡಿಲಾದ ಎದೆಗೂಡ ಅಲ್ಲಾಡಿಸಿ, ಮಾಳಿಗೆ ಎಗರಿಸುವಂತ ಕೆಮ್ಮು ತರಿಸಿತು. ಗಾಬಮ್ಮ ಮದುವೆಯಾಗಿ ಮೊದಲ ರಾತ್ರಿಯಿಂದ ಹೊತ್ತಿಳಿವ ವಯಸ್ಸಿನವರೆಗೂ ಗಂಡ ಕೊಟ್ಟ ಕ್ವಾಟ್ಲೆ ಸಹಿಸಿ ಸಾಕಾಗಿದ್ದಳು. ಗಂಡನ ಅಂಗಾಂಗ ಅವನ ಮಾತು ಕೇಳದ ನಿಜವನರಿತಳು. ಇತ್ತಿತ್ತಲಿಗೆ ಎದುರು ಮಾತಾಡುವ ಧೈರ್ಯ ಬರಿಸಿಕೊಂಡಿರುವಳು. ಹೊಗೆ ತಂದ ಕೆಮ್ಮಿನ ಕಾಟ ತಾಳದೆ ಗಂಡನ ಮೇಲೆ ಕೋಪಗೊಂಡು; ಹಜಾರ ದಾಟಿ ದಾರಿ ಹೋಕರಿಗೂ ಕೇಳಿಸುವಂತೆ ಗದರಿಸಿ:

‘ಕಟ್ಕಂಡಾಗ್ಲಿಂದ ಹುರಿಯ ಬಾಂಡ್ಲೆಗಾಕಿ ಹುರ್ಕಂಡ್ ತಿಂದ. ಮಸಾಣ್ಕೋಗ ವಯಸ್ಸಾದ್ರೂ ಕ್ವಾಟ್ಲೆ ಕೊಡದ್ ಬಿಡ್ಲಿಲ್ಲ ಈ ಮೂಳ. ಇವುನ್ ನಾಲ್ಗೆ ಸೇದೋಗ’ ಎನ್ನುತ್ತ ಅರೆದೆಗೆದ ಬಾಗಿಲು ದಡಾರೆಂದು ತೆಗೆದು ಉರಿಗಣ್ಣಾದಳು. ಹೊಗೆ ಕುಡಿದ ಕಣ್ಣಲ್ಲಿ ನೀರು ಧಾರಾಕರಿಸಿ ಗಂಡನ ಮುಕ್ಕುವಂತಾದಳು. ಬೆಂದ ಹುರಿ ಬಾಡಿನ ತಟ್ಟೆ ಗಂಡನ ಕಡೆ ತಳ್ಳಿ ದಡಕ್ಕೆಂದು ಬಾಗಿಲು ನೂಕಿ ಹಿಡಂಬಿಯಂತೆ ಹಿಂತಿರುಗಿ, ‘ತಿಂದ್ ಸಾಯಿ, ರಾತ್ರೆಲ್ಲ ಸಾಯಂಗ್ ಕೆಮ್ಮಿದ್ರೂ ಭಂಗಿ ಸೇದಾದ್ ಬಿಡ್ಲಿಲ್ಲ’ ಎಂದು ದುರ್ಗಿಯಂತೆ ದುರುಗುಟ್ಟಿದಳು.

ಉಲುಪಯ್ಯನ ಸುಕ್ಕುಗಟ್ಟಿದ ತೊಗಲು ಪಕ್ಕದಲ್ಲೇ ಇರುವ ಕೋಲೆತ್ತಲು ಅಸಮರ್ಥವಾಗಿ ಸೋಲೊಪ್ಪಿದಂತಿತ್ತು. ಬತ್ತಿದಂತಾದ ಕಣ್ಣಗುಡ್ಡೆ ದುರುಗುಟ್ಟಲು ಸಹಕರಿಸದೆ ಅವಳ ಸವಾಸ ಬೇಡೆನ್ನುವಂತಾಯಿತು. ಭುಜ ಬಲದ ಬೆಂಬಲವಿಲ್ಲದ ಉಲುಪಯ್ಯ ಹಲ್ಲಿಲ್ಲದ ಬಾಯಲ್ಲಿ ತೊದಲುತ್ತ,

‘ಏ ಗರ್ತಿ ನಾನೆದ್ರು ನೆಟ್ಗಿರಲ್ಲ ನೋಡು. ಎಲಾ ಹೆಂಗ್ಸೆ ನನ್ ನೆಳ್ಗೆ ಹೆದರ್ತಿದ್ದೋಳ್ ಎದುರುತ್ರ ಕೊಡಂಗಾದ. ಆಹಾ... ಆತ್ ಬಿಡೂ ನಿಂಗೂ ಒಂದ್ಕಾಲ’ ಎಂದು



